International Journal of Applied Research 2019; 5(8):83-84




**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2019; 5(8): 83-84
www.allresearchjournal.com
Received: 16-06-2019
Accepted: 20-07-2019

**ಮಂಜುನಾಥ ಸಿದ್ಧರಾಮಪ್ಪ ಶೆಟ್ಟಿ**
ಸಂಶೋಧಕರುಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

**Correspondence**
**ಮಂಜುನಾಥ ಸಿದ್ಧರಾಮಪ್ಪ ಶೆಟ್ಟಿ**
**ಸಂಶೋಧಕರುಕನ್ನಡ ಅಧ್ಯಯನ ಸಂಸ್ಥೆ**
**ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.**

# ಕಲಬುರಗಿ ಪುಸ್ತಕ ಸಂಸ್ಕೃತಿ ಬೆಳವಣಿಗೆಯಲ್ಲಿ ಸಿದ್ಧಲಿಂಗೇಶ್ವರ ಪ್ರಕಾಶನದ ಕೊಡುಗೆ

**ಮಂಜುನಾಥ ಸಿದ್ಧರಾಮಪ್ಪ ಶೆಟ್ಟಿ**

ಓದು ಮಾನವ ಜನ್ಮಸಿದ್ದ ಹಕ್ಕು ಈ ಹಕ್ಕನ್ನು ಉಪಯೋಗಿಸಿಕೊಳ್ಳಲು ರಾಜ್ಯದ ಪ್ರತಿ ನಾಗರೀಕನಿಗೂ ಅನುಕೂಲಗಳನ್ನು ಕಲ್ಪಿಸಿ ಸಾರ್ವಜನಿಕ ಗ್ರಂಥಾಲಯಗಳನ್ನು ಸಾರ್ವಜನಿಕ ಶಿಕ್ಷಣದ ದಿಸೆಯಲ್ಲಿ ಒಂದು ಜೀವಂತ ಶಕ್ತಿಯಾಗಿ ಕೆಲಸ ಮಾಡುವಂತೆ, ಕರ್ನಾಟಕ ಸರ್ಕಾರ 1965 ರಲ್ಲಿ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ ರೂಪಿಸಿ ಸಾರ್ವಜನಿಕ ಗ್ರಂಥಾಲ ಯಗಳ ಜಾಲದ ಬೆಳವಣಿಗೆ ಬುನಾದಿ ಹಾಕಿತು. ಇಂದು ಸಾರ್ವಜನಿಕ ಗ್ರಂಥಾಲಯಗಳ ಬೆಳವಣಿಗೆ ಕರ್ನಾಟಕ ರಾಜ್ಯದಲ್ಲಿ ಗಮನಾರ್ಹವಾದ ರೀತಿಯಲ್ಲಿ ಮುನ್ನಡೆದಿದೆ. ನಮ್ಮ ರಾಜ್ಯ ಇಡೀ ಭಾರತದಲ್ಲಿಯೇ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯ ದೃಷ್ಟಿಯಿಂದ ಮುಂಚೂಣಿಯ ಲ್ಲಿರುವ ರಾಜ್ಯಗಳಲ್ಲಿ ಒಂದು.

ಕಲಬುರಗಿಯಲ್ಲಿ ಇನ್ನೂ ಹೆಚ್ಚಾಗಿ ಅಂದರೆ ಕಲ್ಯಾಣ ಕರ್ನಾಟಕದಲ್ಲಿ ಪುಸ್ತಕ ಸಂಸ್ಕೃತಿ ಬೆಳೆಸುವಲ್ಲಿ ಹಾಗೂ ಉದಯೋನ್ಮುಖ ಲೇಖಕರನ್ನು ಪರಿಚಯಿಸುವ ಕಾಯಕದಲ್ಲಿ ತೋಡಗಿರುವ ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ ಸಂಸ್ಥೆ ಇದೆ.

ಮಹತ್ವಾಕಾಂಕ್ಷಿಯನ್ನು ಹೊಂದಿರುವ ಸಂಸ್ಥೆಗೆ ಬುದ್ಧಿಜೀವಿಗಳು, ಚಿಂತಕರು, ಪ್ರಾಧ್ಯಾಪ ಕರು, ಪುಸ್ತಕ ಪ್ರೀಯರು ಸೇರಿದಂತೆ ಪತ್ರಕರ್ತರು ಬೆಂಬಲಿಸಿ ಪ್ರೋತ್ಸಾಹಿಸಿದ್ದಾರೆ. ಪುಸ್ತಕ ಸಂಸ್ಕೃತಿ ಅಭಿವೃದ್ಧಿಗೆ ಹಿಡಿದ ಕನ್ನಡಿಯಾಗಿರುವ ಸಂಸ್ಥೆ ಇಂದು ಬೆಂಗಳೂರಿನ ಸ್ವಪ್ನ ಹೌಸ್ ಸಂಸ್ಥೆಗೆ ಸರಿಸಾಟಿಯಾಗಿದೆ ಎಂದು ಹೇಳುವಲ್ಲಿ ಹೆಮ್ಮೆ ಎನಿಸುತ್ತಿದೆ. ಕಳೆದ ಮೂರು ದಶಕಗಳಲ್ಲಿ ಸಂಸ್ಥೆ ಬೃಹದಾಕಾರವಾಗಿ ಬೆಳೆದು ಕರ್ನಾಟಕದಲ್ಲಿಯ ಇತರೆ ಹಿರಿಯ ಪ್ರಕಾಶನ ಸಂಸ್ಥೆಯೊಂದಿಗೆ ಆರೋಗ್ಯಕರ ಸ್ಪರ್ಧೆಯೊಡ್ಡಿ ತನ್ನ ನೆಲೆಯನ್ನು ಕಂಡುಕೊಳ್ಳುತ್ತಿದೆ.

ಸಿದ್ಧಲಿಂಗೇಶ್ವರ ಪ್ರಕಾಶನ ಸಂಸ್ಥೆ ಮಾಲಿಕ ಬಸವರಾಜ ಕೊನೇಕ ಕಲಬುರಗಿ ಜಿಲ್ಲೆ ಆಳಂದ ತಾಲೂಕಿನ ಮಾಡ್ಯಾಳ ಗ್ರಾಮದವರು. ಪುಸ್ತಕ ಸಂಸ್ಕೃತಿಯ ಪವಿತ್ರ ಕಾರ್ಯದೆಡೆಗೆ ಮುಖ ಮಾಡಿ ಎಲ್ಲರಿಂದಲೂ ಸೈ ಎನಿಸಿಕೊಂಡಿದ್ದಾರೆ. ಅದೊಂದು ಪವಾಡ ಎನ್ನುವಂತಾದರೆ, ಸ್ವತಃ ಶಿಕ್ಷಣದಿಂದ ವಂಚಿತರಾದ ಕೊನೇಕರವರು ಹಿಂದೂಳಿದ ಪ್ರದೇಶದ ವಿದ್ಯಾರ್ಥಿಯಾಗಿ ಅನೇಕ ನೋವುಗಳನ್ನು ಅನುಭವಿಸಿದವರು. ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಈ ನೋವು ಆಗಬಾರದೆಂದು ಭಾವಿಸಿ ಮಸ್ತಕೋದ್ಯಮದೊಂದಿಗೆ ಸಾಹಿತ್ಯ ಕಲೆ ಹಾಗೂ ಪಠ್ಯ ಮಸ್ತಕ ಪ್ರಕಟಣೆಗೆ ಕೈಹಾಕಿ ಜ್ಞಾನ ಲೋಕವನ್ನು ಹರಿಸಿದ್ದಾರೆ.

ಪುಸ್ತಕ ಮಾರಾಟ ಮತ್ತು ಪ್ರಕಾಶನದ ಕೊರತೆಯನ್ನು ತುಂಬಲು ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಸಂಸ್ಥೆ ಪ್ರಗತಿಯಲ್ಲಿ ಸಂಚಲವನ್ನುಂಟು ಮಾಡಿದ್ದು, ಈ ಭಾಗದ ಭಾಗ್ಯದಾತರೆ ಸರಿ. ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಸಂಸ್ಥೆ 1977 ರಲ್ಲಿ ಕಲಬುರಗಿ ನಗರದ ಮುಖ್ಯ ಬೀದಿಯ ಡಬ್ಬಾ ಅಂಗಡಿಯಲ್ಲಿ ಆರಂಭವಾಗಿ ಇಂದು ಬೃಹದಾಕಾರವಾಗಿ ಬೆಳೆದು ಅನೇಕ ಬರಹಗಾರರಿಗೆ ಸ್ಪೂರ್ತಿ ನೀಡಿದೆ. ಇದರೊಂದಿಗೆ ಬಸವ ಪ್ರಕಾಶನ ಸಂಸ್ಥೆ 1984 ರಲ್ಲಿ ಸ್ಥಾಪಿಸಿ ಪ್ರತಿ ವರ್ಷ ನೂರಕ್ಕೂ ಹೆಚ್ಚು ಕೃತಿಗಳನ್ನು ಹೊರ ತಂದು ಪುಸ್ತಕ ಪ್ರೀಯರಿಗೆ ಹೆಸರುವಾಸಿಯಾಗಿದ್ದಾರೆ.

ನಾನಾ ವಿಷಯದಲ್ಲಿ ಹಿರಿಯ ಮತ್ತು ಕಿರಿಯ ಬರಹಗಾರರಿಂದ ಬರೆಯಿಸಿ ಕೃತಿಗಳನ್ನು ಪ್ರಕಟಿಸಿ ಅವರಿಗೆ ಗೌರವಿಸುವ ಸಂಪ್ರದಾಯ ಹಾಕಿಕೊಂಡು ಬರುತ್ತಿರುವ ಕೊನೇಕರ ಶ್ರದ್ಧೆ ಮೆಚ್ಚುವಂತಹದ್ದು, ವಿಶೇಷವಾಗಿ ಈ ಭಾಗದ ಪ್ರತಿಭಾವಂತ ಸಾಹಿತಿಗಳ ಹಾಗೂ ಕಲಾವಿದರ 'ಬದುಕು' ಬರಹವನ್ನುಪುಸ್ತಕಗಳ ಮೂಲಕ ಹೊರ ತಂದು ಮುಂದಿನ ಪೀಳಿಗೆಗೆ ಪರಿಚಯಿಸಿದ್ದಾರೆ.

ವಿದ್ಯಾರ್ಥಿ ಮತ್ತು ಅಧ್ಯಾಪಕರ ಶಿಕ್ಷಣಕ್ಕೆ ಅನುಪಮ ಸೇವೆ ಸಲ್ಲಿಸುತ್ತಿರುವ ಈ ಸಂಸ್ಥೆಯ ಕುರಿತು ಅಸಂಖ್ಯಾಅಭಿಮಾನಿಗಳು ಹಾರೈಕೆ ನೀಡಿ ಆಶೀರ್ವದಿಸಿದ್ದಾರೆ. "ಪ್ರಕಾಶಕರಿಲ್ಲದೆ ನರಳುತ್ತಿರುವ ಈ ಭಾಗದ ಲೇಖಕರಿಗೆ ಇದೊಂದು ಓಯಾಸಿಸ್ ಆಗಿದೆ" ಎಂದು ಪ್ರೊ. ಶಿವರಾಜ ಪಾಟೀಲ ಅಭಿಪ್ರಾಯಪಟ್ಟಿದ್ದನ್ನು ಸ್ಮರಿಸಬಹುದು.

ಇದುರವರೆಗೆ 750 ಪುಸ್ತಕಗಳನ್ನು ಪ್ರಕಟಿಸಿ ಮಹತ್ವಾಧನೆಗೈದ ಸಂಸ್ಥೆಯು ಅಕ್ಷರ ಲೋಕದಲ್ಲಿ ಆಶ್ಚರ್ಯ ಮೂಡಿಸಿದೆ. 'ಎಲ್ಲ ಕ್ಷೇತ್ರದಲ್ಲಿ ಹಿಂದುಳಿದಿದೆ ಎಂದು ಹೇಳಲಾದ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಇಂತಹದೊಂದು ಸಂಸ್ಥೆ ಇರುವುದು ಸೋಜಿಗದ ಸಂಗತಿ' ಎಂದು ಗದಗಿನ ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳು ಆಶೀರ್ವದಿಸಿದ್ದಾರೆ. ಕಲಬುರಗಿಯ ಶ್ರೀ ಶರಣಬಸವೇಶ್ವರ ಮಹಾದಾಸೋಹ ಸಂಸ್ಥಾನ ಪೀಠಾಧ್ಯಕ್ಷರಾದ ಡಾ.ಶರಣಬಸಪ್ಪ ಅಪ್ಪ ಅವರು, ಒಂದು ವಿಶ್ವವಿದ್ಯಾಲಯ ಮಾಡಬೇಕಾದುದ್ದನ್ನು ಶ್ರೀ ಸಿದ್ಧಲಿಂಗೇಶ್ವರ ಸಂಸ್ಥೆ ಮಾಡುತ್ತಿದೆ ಎಂದು ಶ್ಲಾಘಿಸಿದ್ದಾರೆ.

ಹಿರಿಯ ಸಾಹಿತಿಗಳಾದ ಪ್ರೊ. ಜಿ.ಎಸ್.ಸಿದ್ಧಲಿಂಗಯ್ಯನವರು ಈ ಪ್ರಕಾಶನ ಸಂಸ್ಥೆ ಕಲ್ಯಾಣ ಕರ್ನಾಟಕ ಪ್ರದೇಶದ ಉದಯೋನ್ಮುಖ ಲೇಖಕರ ಬರಹಗಳು ಪ್ರಕಟಿಸಿ ಪ್ರೋತ್ಸಾಹಿಸುವ ಆಗಾಧ ಸಾಧನೆ ಮಾಡಿದೆ. ಈ ಪ್ರಕಾಶನ ಸಂಸ್ಥೆಯ ಸಾಧನೆಗೆ ಹತ್ತು ಹಲವು ಪ್ರಶಸ್ತಿಗಳು ಲಭಿಸಿ ಪ್ರತಿಕೆಗೆ ಗರಿ ಮೂಡಿಸಿದ ಕಲಬುರಗಿ ವಿಶ್ವವಿದ್ಯಾಲಯದಿಂದ ಅತ್ಯುತ್ತಮ ಪ್ರಕಾಶನ ಸಂಸ್ಥೆ, ಕನ್ನಡ ಪುಸ್ತಕ ಪ್ರಾಧಿಕಾರದಿಂದ ವಿಭಾಗ ಮಟ್ಟದ ಪ್ರಕಾಶನ ಸಂಸ್ಥೆ, ಮಹಾಂತ ಜ್ಯೋತಿ ಪ್ರತಿಷ್ಠಾನದಿಂದ ಬೆಸ್ಟ್ ಪಬ್ಲಿಷರ್ಸ್, ದೆಹಲಿ ಕನ್ನಡ ಪತ್ರಿಕೆಯಿಂದ ಅತ್ಯುತ್ತಮ ಪ್ರಕಾಶನ ಇವುಗಳಲ್ಲದೇ ಭಾಲ್ಕಿ ಪಟ್ಟದ್ದೇವರ ಸ್ಮರಣಾರ್ಥ, ಕೊಪ್ಪಳ ಭೀಮರಾಯ ಮತ್ತು ಕುಕನೂರಿನ ತಾಯಿ ಕೂಡ ಮಾಡಿದ ಪ್ರಶಸ್ತಿಗಳು ಸಂದಿಸುವುದು ಅಭಿಮಾನದ ದ್ಯೋತಕ.

ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಸಂಸ್ಥೆ ಹಲವು ಮೌಲಿಕ ಕೃತಿಗಳನ್ನು ಪ್ರಕಟಿಸಿದೆ ಕೆಲವು ಪುಸ್ತಕಗಳು ರಾಜ್ಯಮಟ್ಟದಲ್ಲಿ ಹೆಸರುಗಳಿವೆ. ಅವುಗಳಲ್ಲಿ 800 ಪುಟದ "ಕನ್ನಡ ಸಾಹಿಯ ಸಂಸ್ಕೃತಿ ಕೋಶ" ಹಾಗೂ 1200 ಪುಟದ "ಸಮಗ್ರ ಸಮಾಜಶಾಸ್ತ್ರ ಪ್ರಮುಖವಾಗಿದೆ. ಸಂಸ್ಥೆಯಲ್ಲಿ ಪ್ರಕಟವಾದ ಎಷ್ಟೋ ಪುಸ್ತಕಗಳು ಗುಲಬರ್ಗಾ ವಿಶ್ವವಿದ್ಯಾಲಯದ ಪಠ್ಯಗಳಾಗಿವೆ.

ಗುಲಬರ್ಗಾ ವಿಶ್ವವಿದ್ಯಾಲಯ ಪಠ್ಯಕ್ಕನುಗುಣವಾಗಿ ಪ್ರಕಟಿಸಿದ ಪುಸ್ತಕಗಳು ಸಾಂದರ್ಭಿಕ ಪುಸ್ತಕಗಳಾಗಿರುವುದು ಹೆಮ್ಮೆಯ ವಿಚಾರ, ಗುಲಬರ್ಗಾ ವಿಶ್ವವಿದ್ಯಾಲಯ ಸಂಲಗ್ನಿತ ಎಲ್ಲ ಕಾಲೇಜು ಗ್ರಂಥಾಲಯಗಳ ಭಂಡಾರಕ್ಕೆ ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ ಸಂಸ್ಥೆಯಿಂದ ಪುಸ್ತಕಗಳು ಸರಬರಾಜಾಗುತ್ತಿರುವುದು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸುವ ಕೊಡುಗೆ ಎನ್ನಬಹುದು.

**ಆಕರ ಗ್ರಂಥಗಳು**

1. ಶಿಕ್ಷಣ ಶಿಲ್ಪಿ ಬಸವರಾಜ ಕೊನೆಕ್ – ಡಾ. ವಸಂತ ನಾಸಿ
2. ಪುಸ್ತಕ ಪ್ರೇಮಿ ಬಸವರಾಜ ಕೊನೆಕ್ – ಡಾ. ರಾಜಕುಮಾರ